## ನಿವೇದನೆ

# ಹುಡುಗರಾದರೇನು...?

ಮಕ್ಕಳು ಮಕ್ಕಳಾಗಿಯೇ ಬೆಳೆಯಬೇಕು. ಹೆಣ್ಣು–ಗಂಡು ಎಂಬ ವರ್ಗೀಕರಣದಲ್ಲಿ ಅಲ್ಲ. ಬಹುತೇಕ ತಾಯಂದಿರಲ್ಲಿಯೂ ಗಂಡಾಳ್ವಿಕೆಯ ಮನಸ್ಥಿತಿ ಇರುವುದರಿಂದ ಗಂಡುಮಕ್ಕಳನ್ನು ವಿಶೇಷ ಅಕ್ಕರೆಯಿಂದ ಆರೈಕೆ ಮಾಡುತ್ತಾರೆ. ಹೆಣ್ಣುಮಕ್ಕಳನ್ನು ಕಣ್ಣಳತೆಯಲ್ಲಿಯೇ ನಿಯಂತ್ರಿಸುತ್ತಾರೆ.

ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತರಲ್ಲಿ ಶೇ 54.68ರಷ್ಟು ಬಾಲಕರೇ ಇದ್ದಾರೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಮಾಹಿತಿ ಹೇಳುತ್ತದೆ. ನವದೆಹಲಿಯ ಕೋರ್ಟ್‌ನ ಪ್ರಾಸಿಕ್ಯುಟರ್ ಬಾಲಕನ ಮೇಲೆ ದೌರ್ಜನ್ಯ ನಡೆದ ಸಂದರ್ಭದಲ್ಲಿ ಈ ಮಾಹಿತಿಯನ್ನು ತಮ್ಮ ವಾದದಲ್ಲಿ ಬಳಸಿಕೊಂಡಿದ್ದಾರೆ. ಲೈಂಗಿಕ ದೌರ್ಜನ್ಯಕ್ಕೆ ತುತ್ತಾಗುವುದರಲ್ಲಿ ಹುಡುಗಿಯರೇ ಹೆಚ್ಚು ಎಂಬುದೊಂದು ಸಾಮಾನ್ಯ ಗ್ರಹಿಕೆ ಆಗಿದೆ. ಆದರೆ ತೋಳ್ಬಲವನ್ನೇ ಪೌರುಷವೆಂದು ಪ್ರತಿಪಾದಿಸುವ ಈ ಸಮಾಜದಲ್ಲಿ ಬಾಲಕರ ಮೇಲಿನ ಲೈಂಗಿಕ ದೌರ್ಜನ್ಯದ ಪ್ರಕರಣಗಳು ಬೆಳಕಿಗೆ ಬರುವುದೇ ಇಲ್ಲ. ದೌರ್ಜನ್ಯಕ್ಕೆ ಒಳಗಾದ ಬಾಲಕರು ತಾವು ಹೇಳಿಕೊಳ್ಳುವುದೂ ಅಪಮಾನಕರ ಎಂದು ಭಾವಿಸಿ, ನೋವುಣ್ಣುತ್ತಾರೆ.

ಮಕ್ಕಳನ್ನು ಬೆಳೆಸುವಾಗಲೂ ‘ಹುಡುಗರು ಅಳಕೂಡದು’ ಗಂಡು ಹುಡುಗರು ಹೊಡೆಸಿಕೊಳ್ಳಬಾರದು ಎಂಬೆಲ್ಲ ಬಾರದುಗಳ ನಡುವೆ ಅವರೊಳಗೊಂದು ಹುರಿಯಾಳಿನ ಕಲ್ಪನೆ ಹುಟ್ಟುಹಾಕುತ್ತದೆ ಸಮಾಜ. ಆಕಸ್ಮಿಕವಾಗಿ ಕಣ್ಣೀರಿಟ್ಟರೆ, ಯಾರ ಬಳಿಯಾದರೂ ಹೊಡೆತ ತಿಂದರೆ ಅದು ತನ್ನ ದೌರ್ಬಲ್ಯವೆಂದೇ ನಂಬಿಕೊಂಡು ಆ ಮಗು ಬೆಳೆಯುತ್ತದೆ.

ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುವ ಗಂಡುಮಕ್ಕಳಲ್ಲಿ ಬಹುತೇಕ ಮಕ್ಕಳು ಸಹಸಂಬಂಧಿಗಳಿಂದ ಹಿರಿಯ ಸ್ನೇಹಿತರಿಂದಲೇ ದೌರ್ಜನ್ಯಕ್ಕೆ ಒಳಗಾಗಿರುತ್ತಾರೆ. ಅವಮಾನದಿಂದ ಕುದಿಯುವ ಈ ಮಕ್ಕಳು ತಮಗಿಂತಲೂ ಚಿಕ್ಕ ಮಕ್ಕಳ ಮೇಲೆ ದೌರ್ಜನ್ಯ ಮಾಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಈ ಸರಣಿ ಹೀಗೆಯೇ ಮುಂದುವರಿದರೆ, ಕೊಂಡಿ ಮುರಿಯುವುದೆಲ್ಲಿ? ಮುರಿಯಬೇಕಾದವರು ಯಾರು?

ನಮ್ಮ ಶಿಕ್ಷಣ ಪದ್ಧತಿಯಲ್ಲಿ ಈಗಲೂ ಲೈಂಗಿಕ ಶಿಕ್ಷಣವೆಂದರೆ ಸಂತಾನೋತ್ಪತ್ತಿಯನ್ನು ವಿವರಿಸುವುದೇ ಆಗಿದೆ. ಸ್ಪರ್ಶಜ್ಞಾನದ ಕುರಿತು ಪಂಚೇಂದ್ರಿಯಗಳನ್ನು ವಿವರಿಸುವುದೇ ಆಗಿದೆ. ‘ಗುಡ್ ಮತ್ತು ಬ್ಯಾಡ್ ಟಚ್’ಗಳ ವಿವರಗಳನ್ನು ನೀಡುವುದೇ ಇಲ್ಲ. ಲೈಂಗಿಕ ಶಿಕ್ಷಣದಲ್ಲಿ ಇಂಥ ಸ್ಪರ್ಶಗಳ ಕುರಿತೂ ತಿಳಿಹೇಳಬೇಕಾಗಿದೆ. ಮತ್ತೆ ದೌರ್ಜನ್ಯ ಹಾಗೂ ಕಿರುಕುಳಗಳು ಹೆಣ್ಣುಮಕ್ಕಳಿಗಷ್ಟೇ ಅಲ್ಲ, ಗಂಡುಮಕ್ಕಳಿಗೂ ಆಗುತ್ತವೆ. ಒಟ್ಟಿನಲ್ಲಿ ನಮ್ಮ ಮಕ್ಕಳು ಈ ಕಿರುಕುಳದಿಂದ ನಲುಗಿ ಹೋಗುತ್ತಾರೆ.

ಎಲ್ಲ ಮಕ್ಕಳಿಗೂ ದೇಹಭಾಷೆಯನ್ನು ಕಲಿಸಬೇಕಾಗಿದೆ. ಹಿತವಲ್ಲದ ಸ್ಪರ್ಶ, ಎದೆ, ತೊಡೆ, ಕಾಲುಗಳ ಸಂದಿಯನ್ನು ಸ್ಪರ್ಶಿಸುವುದು ಹೆತ್ತವರನ್ನೂ ದೂರವಿಡಬೇಕು ಎಂಬುದನ್ನು ಹೇಳಿಕೊಡಬೇಕಾಗಿದೆ. ಹತ್ತಿರದ ಸಂಬಂಧಿಗಳು, ಕುಟುಂಬದ ಸ್ನೇಹಿತರು ಅನುನಯಿಸಿ, ಹಿತವಾದ ಮಾತುಗಳನ್ನಾಡುತ್ತ, ಉಡುಗೊರೆ, ತಿಂಡಿಗಳ ಆಮಿಷ ಒಡ್ಡುತ್ತ ಮಕ್ಕಳನ್ನು ತಮ್ಮ ವಾಂಛೆಗೆ ಬಳಸಿಕೊಳ್ಳುವ ಹಿತಚಿಂತಕರ ಬಗ್ಗೆ ಎಚ್ಚರ ಮೂಡಿಸಬೇಕಾಗಿದೆ.

ಬದಲಾಗುತ್ತಿರುವ ಸಮಾಜದಲ್ಲಿ ಮಕ್ಕಳನ್ನು ಬೆಳೆಸುವ ಭಾಷ್ಯ ಬದಲಾಗಬೇಕಾಗಿದೆ. ಮಕ್ಕಳು ಮಕ್ಕಳಾಗಿಯೇ ಬೆಳೆಯಬೇಕು. ಹೆಣ್ಣುಮಕ್ಕಳಾಗಿ, ಗಂಡುಮಕ್ಕಳಾಗಿ ಅಲ್ಲ. ಬಹುತೇಕ ತಾಯಂದಿರಲ್ಲಿಯೂ ಈ ಗಂಡಾಳ್ವಿಕೆಯ ಮನಸ್ಥಿತಿ ಇರುವುದರಿಂದಲೇ ಗಂಡು ಮಕ್ಕಳನ್ನು ವಿಶೇಷ ಅಕ್ಕರೆಯಿಂದ ಆರೈಕೆ ಮಾಡುತ್ತಾರೆ. ಹೆಣ್ಣುಮಕ್ಕಳನ್ನು ಕಣ್ಣಿನಳತೆಯಲ್ಲಿಯೇ ಕಣ್ಣಲ್ಲಿಯೇ ಗದರುತ್ತಲೂ ಬೆಳೆಸುತ್ತಾರೆ. ಈ ಎರಡೂ ಗುಣಗಳಿಂದಲೇ ಹೆಣ್ಣುಮಕ್ಕಳಾಗಲೀ, ಗಂಡುಮಕ್ಕಳಾಗಲೀ ತಮ್ಮ ಮೇಲೆ ದೌರ್ಜನ್ಯವಾದಾಗ, ಯಾರಾದರೂ ಕಿರುಕುಳ ನೀಡಿದರೆ ಮುಚ್ಚಿಡುತ್ತವೆ. ಹೇಳಿದರೆ ಎಲ್ಲಿ ತಮ್ಮದೇ ತಪ್ಪು ಎಂಬಂಥ ನಿಂದನೆ ಕೇಳಬೇಕಾಗುವುದೇನೋ ಎಂದು ಆತಂಕ ಪಡುತ್ತವೆ.

ಸೂಕ್ಷ್ಮ ಮತ್ತು ಮೆದುಮನಸಿನ ಮಕ್ಕಳು ಒಳಗೊಳಗೇ ಈ ಹಿಂಸೆಯನ್ನು ಸಹಿಸಿಕೊಳ್ಳುತ್ತಾರೆ. ಆದರೆ ಅವರ ಜೀವನವಿಡೀ ಇವು ಕೆಟ್ಟಕನಸುಗಳಾಗಿ ಕಾಡುತ್ತಲೇ ಇರುತ್ತವೆ. ಒಂದಿನಿತು ಆಳ್ವಿಕೆಯ ಮನಸ್ಥಿತಿ ಇದ್ದರೂ ಆ ಮಕ್ಕಳು ಮತ್ತೆ ದೌರ್ಜನ್ಯ ಎಸಗುವವರಾಗಿ ಬದಲಾಗುತ್ತಾರೆ. ಅಸಹಾಯಕರನ್ನು ಕಂಡಾಗಲೆಲ್ಲ ಅವರೊಳಗಿನ ಹಿಂಸೆ ನೀಡುವ ಗುಣ ಜಾಗೃತವಾಗುತ್ತದೆ. ತಮ್ಮೊಳಗಿನ ಅವಮಾನವನ್ನು ದಮನಿತಗೊಳಿಸಲು, ಇನ್ನೊಂದು ಜೀವವನ್ನು ಹಿಂಸೆಗೆ ಈಡು ಮಾಡುತ್ತಾರೆ. ಈ ಸರಪಳಿ ಹೀಗೆಯೇ ಮುಂದುವರಿಯುತ್ತದೆ.

ಪಾಲಕರು ಮತ್ತು ಶಿಕ್ಷಕರು ಈ ವಿಷಯದಲ್ಲಿ ಗುರುತರವಾದ ಜವಾಬ್ದಾರಿ ಹೊರಬೇಕಾಗುತ್ತದೆ. ಮಕ್ಕಳಿಗೆ ತಮ್ಮನ್ನು ತಾವು ಸುರಕ್ಷಿತವಾಗಿಡುವ ಪಠ್ಯಕ್ರಮ ಮತ್ತು ಪೋಷಣೆ ಎರಡೂ ಅಗತ್ಯವಾಗಿವೆ. ಕೆಲವೊಮ್ಮೆ ಪಠ್ಯಕ್ರಮದಲ್ಲಿದ್ದರೂ ಆ ಪುಟಗಳನ್ನು, ಪಾಠಗಳನ್ನು ಪರಿಣಾಮಕಾರಿಯಾಗಿ ಮಕ್ಕಳಿಗೆ ಮನವರಿಕೆಯಾಗುವಂತೆ ಹೇಳುವುದಿಲ್ಲ. ನಮ್ಮ ಮುಂದಿನ ತಲೆಮಾರು ದೈಹಿಕ ಹಲ್ಲೆ, ಕಿರುಕುಳಗಳಿಲ್ಲದೆ ಬೆಳೆಯಬೇಕು. ಇಂಥ ಕಿರುಕುಳಗಳಿಂದ ಅವರೂ ದೌರ್ಜನ್ಯಗಳ ಸಾಗಣೆದಾರರಂತೆ ಬದಲಾಗುವುದು ನಿಲ್ಲಬೇಕಾಗಿದೆ.

ಮಕ್ಕಳ ಸುರಕ್ಷೆಗಾಗಿ ಪರಿಹಾರೋಪಾಯಗಳನ್ನು ಸೂಚಿಸುವುದು, ನಿರ್ದೇಶಿಸುವುದು, ಅಳವಡಿಸುವುದು, ಅನುಷ್ಠಾನಗೊಳಿಸುವುದು ಇದೆಲ್ಲವೂ ಸರಿಯೇ. ಆದರೆ ಒಂದು ಸುರಕ್ಷಿತ ಸಮಾಜ, ಸುರಕ್ಷಿತ ಪರಿಸರವನ್ನು ನೀಡುವುದು ಆಗುತ್ತಿಲ್ಲ ಎಂಬುದೇ ದುರಂತ.

■ ರಶ್ಮಿ ಎಸ್



ವಿಜಯ